# ನಿಮ್ಮೊಡನೆ

## ಶಾಲೆಗಳಲ್ಲಿ ಶೌಚ-ಲಯ!

**ಒಂದೆಡೆ ಅತ್ಯಾಧುನಿಕ ಶೌಚಾಲಯ ಹೊಂದಿದ ಐಶಾರಾಮಿ ಸರ್ಕಾರಿ ಬಸ್ಸುಗಳು ಓಡಾಟ; ಇನ್ನೊಂದೆಡೆ ರಾಜ್ಯದ 1762 ಶಾಲೆಗಳಲ್ಲಿ ಶೌಚಾಲಯಗಳೇ ಇಲ್ಲ! ಅಭಿವೃದ್ಧಿಯಲ್ಲೂ ಎಷ್ಟೊಂದು ಅಸಮಾನತೆಗಳಿವೆ ಎನ್ನುವುದಕ್ಕೆ ಈ ವರದಿಗಳೇ ಸಾಕ್ಷಿ.**

**2012** ರ ಅಂತ್ಯದೊಳಗೆ ಇಡೀ ರಾಷ್ಟ್ರದಾದ್ಯಂತ ಸಂಪೂರ್ಣ ಸ್ವಚ್ಛತೆ ಸಾಧಿಸುವ ಮಹತ್ವಾಕಾಂಕ್ಷೆಯ ಯೋಜನೆ ಜಾರಿಗೆ ಬಂದು ವರ್ಷಗಳೇ ಉರುಳಿವೆ. ಆದರೆ ದೇಶದ ಎಲ್ಲ ಶಾಲೆಗಳಲ್ಲಿ ಇನ್ನೂ ಕುಡಿಯುವ ನೀರು ಮತ್ತು ಶೌಚಾಲಯದ ವ್ಯವಸ್ಥೆ ಮಾಡಲು ಸಾಧ್ಯವಾಗಿಲ್ಲ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಈ ವಿಷಯದಲ್ಲಿ ಸುಪ್ರೀಂ ಕೋರ್ಟಿನಿಂದ ಪದೇ ಪದೇ ಪಾಠ ಹೇಳಿಸಿಕೊಳ್ಳುತ್ತಿರುವುದು ಆಡಳಿತದ ವೈಫಲ್ಯಕ್ಕೆ ಒಂದು ನಿದರ್ಶನ. 'ದೇಶದ ಎಲ್ಲ ಶಾಲೆಗಳಲ್ಲಿ ಇನ್ನು ಆರು ತಿಂಗಳೊಳಗೆ ಕುಡಿಯುವ ನೀರು ಮತ್ತು ಶೌಚಾಲಯದ ವ್ಯವಸ್ಥೆ ಮಾಡಬೇಕೆಂದು' ಕಳೆದ ವಾರ ಸುಪ್ರೀಂಕೋರ್ಟ್ ಮತ್ತೊಮ್ಮೆ ತಾಕೀತು ಮಾಡಿದೆ. ಕಳೆದ ವರ್ಷ ಅಕ್ಟೋಬರ್ ತಿಂಗಳಲ್ಲೂ ಈ ವಿಷಯದ ಕುರಿತು 'ಗರಂ' ಆಗಿದ್ದ ಸುಪ್ರೀಂಕೋರ್ಟ್, 'ಹೆಣ್ಣುಮಕ್ಕಳಿಗೆ ಶಾಲೆಗಳಲ್ಲಿ ಪ್ರತ್ಯೇಕ ಶೌಚಾಲಯ ನಿರ್ಮಿಸಿ' ಎಂದು ಸರಕಾರಗಳಿಗೆ ಸೂಚನೆ ನೀಡಿತ್ತು. ಆದರೆ 'ಆಳುವವರ ಚರ್ಮ ದಪ್ಪ' ಎನ್ನುವುದು ಮತ್ತೆ ಮತ್ತೆ ಸಾಬೀತಾಗುತ್ತಲೇ ಇದೆ. ತಮ್ಮ ಮನೆಗಳಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಕಕ್ಕಸುಗಳನ್ನೂ ಅರಮನೆಗಳಂತೆ ನಿರ್ಮಿಸುವ ರಾಜಕಾರಣಿಗಳು ನಮ್ಮಲ್ಲಿದ್ದಾರೆ. ಬಹುತೇಕ ಅಧಿಕಾರಸ್ಥರ ಮನೆ– ಕಕ್ಕಸು ನವೀಕರಣ, ಆಧುನೀಕರಣಕ್ಕೆ ಸರಕಾರದ ದುಡ್ಡೇ ಖರ್ಚಾಗುತ್ತದೆ. ಆದರೆ ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಸೂಕ್ತ ಶೌಚಾಲಯದ ನಿರ್ಮಾಣ ಮಾಡುವ ಕೆಲಸಕ್ಕೆ ಮಾತ್ರ ಸರಕಾರದ ಬಳಿ ದುಡ್ಡು ಇರುವುದಿಲ್ಲ; ಎಲ್ಲ ಕಡೆ ಶೌಚಾಲಯ ಕಟ್ಟಿಸಲಾಗಿದೆಯೆ, ಕಟ್ಟಿಸಿದ್ದರೆ ಅದರ ನಿರ್ವಹಣೆ ಸರಿಯಾಗಿ ನಡೆಯುತ್ತಿದೆಯೆ.. ಎನ್ನುವುದನ್ನು ಪರಿಶೀಲಿಸುವ ವ್ಯವಧಾನವೂ ಅಧಿಕಾರಸ್ಥರಿಗೆ ಇರುವುದಿಲ್ಲ.

ಅಭಿವೃದ್ಧಿಯ ಹಲವು ವಿಷಯಗಳಲ್ಲಿ ಮುಂಚೂಣಿಯಲ್ಲಿರುವ ನಮ್ಮ ರಾಜ್ಯದಲ್ಲೂ ಈ ಶೌಚ–ಲಯದ ಪರಿಸ್ಥಿತಿ ಭಿನ್ನವಾಗಿಯೇನೂ ಇಲ್ಲ. ರಾಜ್ಯದ 49,658 ಶಾಲೆಗಳ ಪೈಕಿ 1762 ಶಾಲೆಗಳಲ್ಲಿ ಶೌಚಾಲಯಗಳಿಲ್ಲ ಎಂದು ಸರಕಾರಿ ಅಂಕಿ ಅಂಶಗಳೇ ಹೇಳುತ್ತವೆ! ಈ ಶಾಲೆಗಳಲ್ಲಿ ಕಲಿಯುವ ಹೆಣ್ಣು ಮಕ್ಕಳ ಸ್ಥಿತಿಯಂತೂ ಹೇಳುವುದು ಬೇಡ. ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ನಿರ್ಮಿಸುವುದು ಒತ್ತಟ್ಟಿಗಿರಲಿ, ಶಾಲೆಗೊಂದು ಸಾಮಾನ್ಯ ಶೌಚಾಲಯವೂ ಇರುವುದಿಲ್ಲ. ಈ ಕಾರಣಕ್ಕಾಗಿಯೇ ಎಷ್ಟೋ ಹಳ್ಳಿಗಳಲ್ಲಿ, ಹೆಣ್ಣುಮಕ್ಕಳು ಪ್ರೌಢಶಾಲೆಯ ಮಟ್ಟಕ್ಕೆ ವಿದ್ಯಾಭ್ಯಾಸಕ್ಕೆ ತಿಲಾಂಜಲಿ ಹೇಳುವುದಿದೆ. ಹಲವೆಡೆ ತೀರಾ ಮುಜುಗರ ಪಟ್ಟು ಶಿಕ್ಷಕರ ಅನುಮತಿ ಪಡೆದು ಹೆಣ್ಣುಮಕ್ಕಳು ಅರ್ಧದಲ್ಲಿ ಮನೆಗೆ ಮರಳುವುದೂ ಇದೆ. ಮುಜುಗರದ ಪರಿಸ್ಥಿತಿಯೇ ಬೇಡವೆಂದು ಹೆತ್ತವರೇ ಮಕ್ಕಳನ್ನು ಹೈಸ್ಕೂಲಿಗೆ ಕಳುಹಿಸುವುದನ್ನು ನಿಲ್ಲಿಸುವುದೂ ಇದೆ. ಸ್ವತಃ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರ ಕ್ಷೇತ್ರದಲ್ಲೇ ಶೌಚಾಲಯಕ್ಕೆಂದು ಕಟ್ಟಿಸಿದ ಸಣ್ಣ ಕಟ್ಟಡದಲ್ಲೇ ಶಾಲೆಯೊಂದು ನಡೆಯುತ್ತಿರುವುದನ್ನು ಇತ್ತೀಚೆಗೆ ಪತ್ರಿಕೆಯೊಂದು ಬಯಲು ಮಾಡಿತ್ತು. ಶೌಚಾಲಯದ ಕೋಣೆಗಳನ್ನೇ ತರಗತಿ ಮಾಡಿರುವುದರಿಂದ ಅಲ್ಲಿ ಬಯಲೇ ಶೌಚಾಲಯವಾಗಿತ್ತು! ಒಂದೆಡೆ ರಾಜಧಾನಿಯಲ್ಲಿ ಅತ್ಯಾಧುನಿಕ ಶೌಚಾಲಯ ಹೊಂದಿದ ಐಶಾರಾಮಿ ಸರ್ಕಾರಿ ಬಸ್ಸುಗಳು ಓಡಾಟ ಶುರು ಮಾಡಿವೆ; ಇನ್ನೊಂದೆಡೆ ರಾಜ್ಯದ 1762 ಶಾಲೆಗಳಲ್ಲಿ ಶೌಚಾಲಯಗಳೇ ಇಲ್ಲ ಎಂಬ ನಾಚಿಕೆಗೇಡಿನ ಸಂಗತಿ ಬಯಲಾಗಿದೆ. ಲಕ್ಷ ಕೋಟಿ ರೂಪಾಯಿಗಳ ಬಜೆಟ್‌ನ ಹಣ ಯಾವ ರೀತಿಯಲ್ಲಿ ಖರ್ಚಾಗುತ್ತಿದೆ, ಅಭಿವೃದ್ಧಿಯಲ್ಲೂ ಎಷ್ಟೊಂದು ಅಸಮಾನತೆಗಳಿವೆ ಎನ್ನುವುದಕ್ಕೆ ಈ ವರದಿಗಳೇ ಸಾಕ್ಷಿ. ಇವತ್ತಿಗೂ ಬಯಲು ಶೌಚಾಲಯಗಳನ್ನೇ ನಂಬಿರುವ ಎಷ್ಟೋ ಹಳ್ಳಿಗಳು ರಾಜ್ಯದಲ್ಲಿವೆ. ಊರಲ್ಲೇ ಶೌಚಾಲಯಗಳು ಇಲ್ಲದ ಮೇಲೆ ಅಲ್ಲಿಯ ಶಾಲೆಗಳಲ್ಲಿ ಶೌಚಾಲಯಗಳನ್ನು ನಿರೀಕ್ಷಿಸುವುದಾದರೂ ಹೇಗೆ? ಇಂತಹ ದುಸ್ಥಿತಿಗೆ ಸರಕಾರವನ್ನು ಮಾತ್ರ ದೂರಿದರೆ ಸಾಲದು, ಆಯಾ ಊರಿನ ಮುಖಂಡರು ಮತ್ತು ಪೋಷಕರೂ ಇದಕ್ಕೆ ಜವಾಬ್ದಾರರೇ.

ಇದೇ ವೇಳೆಗೆ ಮಕ್ಕಳ ಹಕ್ಕುಗಳ ಸಂಸ್ಥೆ 'ಕ್ರೈ' ಬಿಡುಗಡೆ ಮಾಡಿರುವ ಸಮೀಕ್ಷೆಯೊಂದು ಇನ್ನಷ್ಟು ದಾರುಣ ಅಂಶಗಳನ್ನು ಬಹಿರಂಗ ಪಡಿಸಿವೆ. 'ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಶೇಕಡಾ 40ರಷ್ಟು ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. 6ರಿಂದ 14 ವರ್ಷದೊಳಗಿನ 1.36 ಕೋಟಿ ಮಕ್ಕಳು ಶಾಲೆಗೆ ಹೋಗುತ್ತಿಲ್ಲ. ಶಾಲೆಗೆ ಪ್ರವೇಶ ಪಡೆದ ಮಕ್ಕಳಲ್ಲೂ ಶೇಕಡಾ 39ರಷ್ಟು ಮಕ್ಕಳು ಒಂದನೇ ತರಗತಿಯಲ್ಲೇ ಶಾಲೆ ಬಿಟ್ಟಿದ್ದಾರೆ' ಎನ್ನುವ ಈ ವರದಿ ದೇಶದ ಶೈಕ್ಷಣಿಕ ರಂಗದ ದುಸ್ಥಿತಿಗೆ ಕೈಗನ್ನಡಿಯಾಗಿದೆ. 'ಚುನಾವಣೆ ಗೆಲ್ಲುವುದೇ ರಾಜಕೀಯ' ಎಂದು ನಂಬಿಕೊಂಡಿರುವ ನಮ್ಮ ಜನಪ್ರತಿನಿಧಿಗಳಿಗೆ ಇಂತಹ ವಿಷಯಗಳು ನಾಚಿಕೆಗೇಡು ಎಂದು ಏಕೆ ಅನ್ನಿಸುತ್ತಿಲ್ಲ?

■ **ಬಿ.ಎಂ.ಹನೀಫ್**



ವಿಷ್ಣು